International Journal of Kannada Research 2022; 8(2): 101-103




International Journal of Kannada Research
www.kannadajournal.com

ISSN: 2454–5813
IJKR 2022; 8(2): 101-103
© 2022 IJKR
www.kannadajournal.com
Received: 02-03-2022
Accepted: 08-04-2022

**ಡಾ. ಸರ್ವೇಶ ಬಿ.ಎಸ್**
ಮುಖ್ಯಸ್ಥರು, ಕನ್ನಡ ವಿಭಾಗ,
ಕ್ರಿಸ್ತು ಜಯಂತಿ ಕಾಲೇಜು
(ಸ್ವಾಯತ್ತ), ಬೆಂಗಳೂರು,
ಕರ್ನಾಟಕ, ಭಾರತ

**Corresponding Author:**
**ಡಾ. ಸರ್ವೇಶ ಬಿ.ಎಸ್**
ಮುಖ್ಯಸ್ಥರು, ಕನ್ನಡ ವಿಭಾಗ,
ಕ್ರಿಸ್ತು ಜಯಂತಿ ಕಾಲೇಜು
(ಸ್ವಾಯತ್ತ), ಬೆಂಗಳೂರು,
ಕರ್ನಾಟಕ, ಭಾರತ

# ಮಾನವೀಯ ಸಂಬಂಧಗಳು–ತಾಂತ್ರಿಕ ಅಡಚಣೆ

**ಡಾ. ಸರ್ವೇಶ ಬಿ.ಎಸ್**

ಗ್ರಾಮೀಣ ಭಾರತ ನಮ್ಮ ಭಾಷೆ ಹಾಗೂ ಸಂಸ್ಕೃತಿಯ ಮೂಲ ನಲೆ. ಅದೇ ಗ್ರಾಮೀಣ ಭಾರತ ನಮ್ಮ ಸಂಬಂಧಗಳ ಉಗಮ ಕೇಂದ್ರ ಹಾಗೂ ಪರಿರಕ್ಷಕ ಕೇಂದ್ರವೂ ಕೂಡ. ನಮ್ಮ ಸಂಬಂಧಗಳನ್ನು ಉಳಿಸುವಲ್ಲಿ, ಬೆಳೆಸುವಲ್ಲಿ ಗ್ರಾಮೀಣ ಭಾರತದ ಪಾತ್ರ ಮಹತ್ತರವಾದದ್ದು. ಗ್ರಾಮವೊಂದನ್ನು ಗಮನಿಸಿದರೆ ಅಲ್ಲಿ ನೆಲೆಸುವ ಹತ್ತಾರು ಕುಟುಂಬಗಳು ಒಟ್ಟಿಗೆ ವಾಸಿಸುವ, ತನ್ಮೂಲಕ ಸಂಬಂಧಗಳನ್ನು ಹೊಸರೀತಿಯಲ್ಲಿ ಪರಿಚಯಿಸುವ ಕೆಲಸವನ್ನು ಮಾಡುತ್ತವೆ. ಒಂದು ರೀತಿ ಅನೌಪಚಾರಿಕ ಶಿಕ್ಷಣವನ್ನು ಗ್ರಾಮೀಣ ಸಂಸ್ಕೃತಿ ನಮ್ಮಲ್ಲಿ ಬೆಳೆಸಿರುತ್ತದೆ. ಇಂದಿಗೂ ಕೂಡ ಗ್ರಾಮೀಣ ಜನರ ಬಾಲ್ಯ ಅತ್ಯಂತ ಆಪ್ತವಾಗಿಯೇ ಇರುತ್ತದೆ. ಒಬ್ಬರಿಗೊಬ್ಬರು ಸಂಬಂಧಗಳನ್ನು ಕಲ್ಪಿಸಿಕೊಂಡೇ ದೈನಂದಿನ ವ್ಯವಹಾರಗಳನ್ನು ಮಾಡುತ್ತಿರುತ್ತಾರೆ. ಒಡಹುಟ್ಟಿದವರಲ್ಲದಿದ್ದರೂ ಅಣ್ಣ, ಅಕ್ಕ, ಅಮ್ಮ ಹೀಗೆ ನಾನಾ ರೀತಿಯ ಸಂಬಂಧ ಸೂಚಕಗಳನ್ನು ಬಳಸಿ ಸಂಬೋಂಧಿಸುವುದನ್ನು ನಾವು ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ಕಾಣಲು ಸಾಧ್ಯ. ಗಾಂಧೀಜಿಯವರ ಗ್ರಾಮಸ್ವರಾಜ್ಯ ಕಲ್ಪನೆಯ ಹಿಂದೆಯೂ ಈ ಮಾನವ ಸಂಬಂಧಗಳ ಶ್ರೀಮಂತ ಭಾರತದ ಕಲ್ಪನೆಯನ್ನು ಮಾಡಲಾಗಿತ್ತೆನಿಸುತ್ತದೆ. ಇಡೀ ವಿಶ್ವ ಇಂದಿಗೂ ಭಾರತದ ಈ ಸಂಸ್ಕೃತಿಯನ್ನು ಕುತೂಹಲದಿಂದ ಹಾಗೂ ಆಪ್ತ ಭಾವದಿಂದ ನೋಡುವುದನ್ನು ನಾವು ಗಮನಿಸಬಹುದು. ಭಾರತದಲ್ಲಿ ಮಾತ್ರವೇ ಅನ್ನಿಸುತ್ತದೆ ಮಗ ಅರವತ್ತರ ವಯಸ್ಸನ್ನ ದಾಟಿದ್ದರೂ ತನ್ನ ತಂದೆಯ ಮಾತನ್ನು ಚಾಚು ತಪ್ಪದೆ, ಅವರಿಗೆ ಎದುರಾಡದೆ ಪಾಲಿಸುವುದು. ಇವಿಷ್ಟೇ ಏನು ನಮ್ಮ ಸಂಬಂಧಗಳ ವಿಶೇಷತೆ ಎಂಬ ಪ್ರಶ್ನೆ ಮೂಡಬಹುದು. ನಮ್ಮ ಪ್ರತಿನಿತ್ಯದ ಜೀವನದಲ್ಲಿ ನಾವು ಮಾನವ ಸಂಬಂಧಗಳ ವೈಭವವನ್ನು ನೋಡಲು ಸಿಗುತ್ತದೆ.

ಇಂದಿಗೂ ಹಲವರಿಗೆ ನೆನಪಿನ ಆಳದಲ್ಲಿ ಬೇರೂರಿಬಿಟ್ಟಿರುವ ಸಂಗತಿ ಅಜ್ಜಿ ಅಥವಾ ಅಜ್ಜ ಹೇಳಿದ ಬಾಲ್ಯದ ಕಥೆಗಳು. ನಮ್ಮ ಸಂಬಂಧಗಳು ಗಟ್ಟಿಯಾಗಿ ಇಂದಿಗೂ ಉಳಿದಿರುವುದಕ್ಕೆ ಕಥೆಗಳ ಪಾತ್ರ ಬಹಳ ಮಹತ್ವದ್ದು. ಗಂಡು ಹೆಣ್ಣಿನ ನಡುವಿನ ಸಂಬಂಧಕ್ಕೆ ಒಂದು ರೂಪವನ್ನು ಎಷ್ಟು ಅರ್ಥಪೂರ್ಣವಾಗಿ ಜನಪದ ಕಥೆಗಳು ಕಟ್ಟುತ್ತಿದ್ದವೆಂಬುದನ್ನು ನೆನೆಯಬಹುದು. ಅಜ್ಜಿ ತಾನು ಹೇಳುವ ಕಥೆಗಳಲ್ಲಿಯೇ ಅಣ್ಣ-ತಂಗಿ, ಅಕ್ಕ-ತಮ್ಮ, ಹೀಗೆ ನಾನು ಭಿನ್ನ ಲಿಂಗೀಯ ಸಂಬಂಧಗಳಿಗೆ ಒಂದು ಚೌಕಟ್ಟನ್ನ ಕಟ್ಟಿಕೊಟ್ಟಿದ್ದಾರೆ. ಇಂದಿಗೂ ಆ ನೆಲೆಯಲ್ಲಿಯೇ ಬದುಕನ್ನ ನಡೆಸುತ್ತಿರುವುದನ್ನು ಸಮಾಜದಲ್ಲಿ ಕಾಣಬಹುದು. ರಾಮಾಯಣ ಮಹಾಭಾರತಗಳು ನಮ್ಮ ಭಾರತೀಯ ಸಂಸ್ಕೃತಿಯ ಮೇಲೆ ಅಪಾರ ಪ್ರಭಾವವನ್ನು ಬೀರಿರುವುದು ಸುಸ್ಪಷ್ಟ. ನಮ್ಮ ಮಾನವ ಸಂಬಂಧಗಳನ್ನು ಗಟ್ಟಿಗೊಳಿಸಲು ಅಲ್ಲಿನ ಪಾತ್ರಗಳು ಹಾಗೂ ಸನ್ನಿವೇಶಗಳನ್ನಾಧರಿಸಿದ ಉಪಕಥೆಗಳು ಒಂದು ಇಡೀ ಸಮಾಜವನ್ನು ಕಟ್ಟುತ್ತವೆ ಎಂದರೆ ಆ ಗ್ರಂಥಗಳ ಪರಿಣಾಮವನ್ನು ನಾವು ತಿಳಿಯಬಹುದಾಗಿದೆ. ಆ ಎರಡೂ ಗ್ರಂಥಗಳಲ್ಲಿ ಎರಡೂ ರೀತಿಯ ಕಲಿಕೆಗೆ ಅವಕಾಶಗಳಿರುವುದನ್ನು ನಾವು ಕಾಣಬಹುದು. ಆ ಹಿನ್ನೆಲೆಯ ಕಥೆಗಳನ್ನೇ ರೂಪಿಸಿರುವುದನ್ನೂ ನಾವು ತಿಳಿಯಲು ಸಾಧ್ಯವಾಗುತ್ತದೆ. ಒಳ್ಳೆ ರೀತಿಯ ಸಂಬಂಧಗಳಿಗೆ ರಾಮ ಹಾಗೂ ಪಾಂಡವರು ಸಾಕ್ಷಿಯಾದರೆ, ಯಾವುದನ್ನು ಕಲಿಯಬಾರದೆಂಬುದನ್ನು ರಾವಣ ಹಾಗೂ ಕೌರವರು ತಿಳಿಸಿಕೊಡುತ್ತಾರೆ. ಈ ನಿಟ್ಟಿನಲ್ಲಿ ಅದೆಷ್ಟು ಉಪಕತೆಗಳು ಬಂದು ಹೋಗಿವೆ. ಅವೆಲ್ಲವೂ ನಮ್ಮಲ್ಲಿ ಒಂದು ಸಾಮಾಜಿಕ ಚೌಕಟ್ಟು ನಿರ್ಮಿಸಿವೆ.

ಆಧುನಿಕತೆಗೆ ಮುಖಮಾಡಲು ಪ್ರಾರಂಭಿಸಿದ ಸಮಾಜ ಒಂದು ಹೊಸ ರೀತಿಯ ಪಲ್ಲಟವನ್ನು ಈ ನೆಲೆಯಲ್ಲಿ ಕಾಣುವಂತಾಯಿತು. ಮಾನವೀಯ ಸಂಬಂಧಗಳು ಒಂದು ಹೊಸ ಆಯಾಮವನ್ನು ರೂಪಿಸಿಕೊಳ್ಳುವ ಪ್ರಯತ್ನವನ್ನು ಮಾಡಿದೆ.

ಎಷ್ಟೆಲ್ಲ ಆಧುನಿಕತೆಯ ಪ್ರಭಾವ ಇದ್ದರೂ ಇಂದಿಗೂ ನಮ್ಮ ಸಮಾಜದಲ್ಲಿ ಸಂಬಂಧಗಳಿಗೆ ಇರುವ ಗೌರವ ಜಗತ್ತಿನ ಇತರ ದೇಶಗಳಿಗೆ ಮಾದರಿಯಾಗಿಯೇ ಉಳಿದಿದೆ. ಎಷ್ಟೇ ಮಾದರಿಯೆಂದು ನಾವು ನಮ್ಮನ್ನು ಹೊಗಳಿಕೆಯ ನೆರಳಲಿ ಕಂಡರೂ ಸಂಬಂಧಗಳು ರೂಪ ಬದಲಿಸಿಕೊಳ್ಳುತ್ತಿರುವುದು ಆತಂಕದ ಸಂಗತಿಯೇ ಸರಿ.

ತಾಂತ್ರಿಕ ಅಡಚಣೆ ಎಂದು ಶೀರ್ಷಿಕೆ ನೀಡಲು ಕಾರಣವೂ ಇದೆ. ಇಂದು ನಾವು ತಂತ್ರಜ್ಞಾನಕ್ಕೆ ಕೊಡುತ್ತಿರುವ ಪ್ರಾಮುಖ್ಯತೆ ನಮ್ಮ ಮೂಲ ಸಂಬಂಧಗಳ ಸ್ವರೂಪವನ್ನೆ ಬದಲಾಯಿಸುವ ಹಾಗೆ ಮಾಡುತ್ತಿವೆ. ನಮ್ಮ ಮಾನವೀಯ ಜೀವನ ಕ್ರಮಕ್ಕೆ ತಂತ್ರಜ್ಞಾನ ಅಡಚಣೆಯಾಗಿಯೇ ನಿಂತಿದೆ. ಸಮಾಜದ ಮಿನಿಯೇಚರ್ ರೂಪವಾಗಿದ್ದ ಕುಟುಂಬವೇ ಈಗ ಹೊಡೆದು ನ್ಯಾನೋ ಕುಟುಂಬಗಳಾಗಿ ಬದಲಾಗುತ್ತಿವೆ. ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬ ಎಂಬ ಪದಗಳು ದೂರಾಗಿಬಿಟ್ಟಿವೆ. ಒಂದು ಕುಟುಂಬದಲ್ಲಿ ಇರುವ ಅಪ್ಪ, ಅಮ್ಮ ಮಗ/ಮಗಳು ಒಟ್ಟಿಗೆ ಸೇರುವುದೇ ಅಪರೂಪವಾಗಿಬಿಟ್ಟಿದೆ. ಮತ್ತೆಲ್ಲಿ ಮಾನವಸಂಬಂಧಗಳು ಗಟ್ಟಿಯಾಗಲು ಸಾಧ್ಯ? ನಾನು ತಾಂತ್ರಿಕ ಅಡಚಣೆ ಎಂದು ಕರೆದಿರುವುದೇ ಇದನ್ನೆ. ಒಂದು ಕೌಟುಂಬಿಕ ಮೌಲ್ಯ ಬೆಳೆಸಬೇಕಾಗಿದ್ದ ಕುಟುಂಬವೇ ತನ್ನ ರೂಪವನ್ನು ವಿರೂಪ ಮಾಡಿಕೊಂಡಿರುವ ಈ ಕಾಲಕ್ಕೆ ಕುಟುಂಬದಿಂದ ಸಿಗಬಹುದಾದ ಮೌಲ್ಯಗಳು ಬಾಲ್ಯದಲ್ಲಿ ಮಕ್ಕಳಿಗೆ ಸಿಗುವುದಾದರೂ ಹೇಗೆ? ಕಥೆ ಕೇಳಿ ಬದುಕಿನ ಮೌಲ್ಯ ಕಟ್ಟಿಕೊಳ್ಳುವುದು ಒಂದೆಡೆಯಿರಲಿ. ಕಥೆ ಹೇಳುವ ಹಾಗೂ ಕೇಳುವ ವ್ಯವದಾನವನ್ನು ನಾವು ಇಂದು ಕುಟುಂಬಗಳಲ್ಲಿ ಉಳಿಸಿದ್ದೇವೆಯೇ? ಗ್ರಾಮಗಳಿಲ್ಲವೇ ಕುಟುಂಬಗಳಿಲ್ಲವೇ ಎನ್ನುವ ಪ್ರಶ್ನೆಗೆ ಇಲ್ಲ ಎಂದು ಉತ್ತರಿಸಲು ಆಗುವುದಿಲ್ಲ. ಹೌದು, ನಮ್ಮಲ್ಲಿ ಇಂದಿಗೂ ಗ್ರಾಮಗಳೂ ಇವೆ, ಅಲ್ಲಿನ ಹಳೇ ರೀತಿಯ ಕುಟುಂಬಗಳೂ ಇವೆ. ಆದರೆ ಆ ಕುಟುಂಬ ಕುಟುಂಬವಾಗಿ ರೂಪುಗೊಳ್ಳುವುದಕ್ಕಿಂತ ಹೆಚ್ಚಾಗಿ ಸಮಸ್ಯೆಯ ಕೇಂದ್ರಗಳಾಗಿವೆ. ಮನೆಯೊಂದು ಮೂರು ಬಾಗಿಲು ಎನ್ನುವ ಹಾಗೆ ಮಕ್ಕಳಿಗೆ ಸಿಗಬಹುದಾಗಿರುವ ಜೀವನ ಪ್ರೀತಿ ಹಾಗೂ ಮೌಲ್ಯಗಳನ್ನು ರೂಢಿಸುವ ವಾತಾವರಣವೆ ಇಲ್ಲವಾಗಿದೆ.

ಮೊಬೈಲ್, ಕಂಪ್ಯೂಟರ್ ಅಂತ ನಮ್ಮ ಮನೆಯನ್ನು ಹೊಕ್ಕಿರುವ ತಂತ್ರಜ್ಞಾನ, ಜೊತೆಗೆ ಟಿವಿ ಪರದೆಯ ಮೇಲೆ ಕುಣಿಯುವ ನೂರಾರು ಚಾನಲ್‌ಗಳ ಹಾವಳಿ ಮನೆಯ ವಾತಾವರಣವನ್ನು ಕೆಡಿಸಿರುವುದನ್ನು ಇಲ್ಲವೆಂದು ಯಾರು ಹೇಳಲು ಸಾಧ್ಯವಾಗದಂತಹ ಸ್ಥಿತಿಗೆ ನಾವು ಬಂದು ತಲುಪಿದ್ದೇವೆ. ತೊಟ್ಟಿಲ ಮಗು ಮಲಗದೆ ಇದ್ದಾಗ ಲಾಲಿ ಹಾಡನ್ನ ಹೇಳಿ ಮಲಗಿಸುತ್ತಿದ್ದ ಕಾಲವೊಂದಿತ್ತು. ಇಂದು ಆ ಸ್ಥಾನವನ್ನು ಮೊಬೈಲ್ ಹಾಡುಗಳು ತುಂಬಿವೆ. ಸ್ವಲ್ಪ ಬೆಳೆದ ಮಕ್ಕಳಿಗೆ ಕಥೆಗಳ ಮೂಲಕ ತುಂಬುತ್ತಿದ್ದ ಮೌಲ್ಯಗಳ ಸ್ಥಾನವನ್ನೂ ಮೊಬೈಲ್ ನುಂಗುತ್ತಿದೆ. ಬದುಕಿನ ಆಶಯವನ್ನು ಕಟ್ಟಿಕೊಡುತ್ತಿದ್ದ ಆಟಗಳನ್ನು ಕೂಡ ಇಂದು ಆಡುತ್ತಿಲ್ಲವೆಂದರೆ ಆಶ್ಚರ್ಯವಾಗುತ್ತದೆ. ಎಲ್ಲವನ್ನು ತಂತ್ರಜ್ಞಾನ ತಾಂತ್ರಿಕ ಅಡಚಣೆಯಾಗಿ ನಿರ್ವಹಿಸುತ್ತಿದೆ.

ಅಪ್ಪ–ಅಮ್ಮ, ಅಣ್ಣ–ತಮ್ಮ, ಅಕ್ಕ–ತಂಗಿ, ಅಜ್ಜಿ–ತಾತ, ಅತ್ತೆ–ಮಾವ, ಚಿಕ್ಕಪ್ಪ–ದೊಡ್ಡಪ್ಪ, ಚಿಕ್ಕಮ್ಮ–ದೊಡ್ಡಮ್ಮ ಹೀಗೆ ಎಷ್ಟೆಲ್ಲ ಸಂಬಂಧಗಳು ನಮ್ಮ ಬದುಕನ್ನ ವರ್ಣಮಯವಾಗಿಸಿದ ಕಾಲವೊಂದಿತ್ತು. ಇಂದು ಸಂಬಂಧಗಳು ಮಾತಿಗೂ ಉಳಿಯದಂತಾಗಿಬಿಟ್ಟಿದ್ದಾವೆ. ಹಿರಿಯರ ಕಂಡರೆ ಇದ್ದ ಗೌರವ, ಕಿರಿಯರ ಕಂಡರೆ ಇದ್ದ ಪ್ರೀತಿ, ಸಮ ವಯಸ್ಕರೊಟ್ಟಿಗೆ ಉಳಿದಿದ್ದ ಸ್ನೇಹ ಹೀಗೆ ಎಲ್ಲ ಸಂಬಂಧಗಳು ಇಂದು ಬಣ್ಣ ಕಳೆದುಕೊಳ್ಳುತ್ತಿದ್ದಾವೆ. ಯಾರಾದರೂ ಊಹಿಸಲು ಸಾಧ್ಯವೇ ಹೆತ್ತ ತಂದೆ ತಾಯಿಯರನ್ನು ಪೋಷಿಸಲು ಸಾಧ್ಯವಾಗದೆ ವೃದ್ಧಾಶ್ರಮಕ್ಕೆ ಸೇರಿಸುವ ಕಾಲವೊಂದು ಬರುತ್ತದೆಂದು? ಕಲ್ಪಿಸಿಕೊಳ್ಳು ಸಾಧ್ಯವೇ ತಂದೆ ತಾಯಿಯರಿಂದ ಆಸ್ತಿ ಪತ್ರಕ್ಕೆ ಸಹಿ ಹಾಕಿಸಿಕೊಂಡು ಮನೆಯಿಂದ ಹೊರಹಾಕುವ ಜನರಿದ್ದಾರೆಂದು? ಕೇಳಿದ ವಸ್ತು ಕೊಡಿಸಿಲ್ಲವೆಂದು ಅಜ್ಜಿಗೆ ವಿಷವಿಕ್ಕಿ ಕೊಲ್ಲುತ್ತಿರುವ ಮೊಮ್ಮಕ್ಕಳನ್ನು ನೊಡುವ ಕಾಲದಲ್ಲಿ ನಾವಿದ್ದೇವೆ. ತನ್ನ ಪ್ರೀತಿಗೆ ಅಡ್ಡಿಯಾಗುತ್ತಿದ್ದಾನೆಂದು ಹೆತ್ತ ತಂದೆಯನ್ನು ಪ್ರಿಯಕರನೊಟ್ಟಿಗೆ ಸೇರಿ ಕೊಲ್ಲಿಸುವ ಮಕ್ಕಳಿರುವ ಸಮಾಜ ನಮ್ಮದೆಂದರೆ ಆಶ್ಚರ್ಯವಾಗುತ್ತದೆ. ತಂದೆ ಮಗಳ ಮೇಲೆ ಅತ್ಯಾಚಾರವೆಸಗುವುದೆಂದರೇನು? ಕೇಳುವ ಕಿವಿಗಳು ಓದುವ ಕಣ್ಣುಗಳು ಒಪ್ಪಿಕೊಳ್ಳಲಾಗದ ಸಮಾಜದ ಮುಖಗಳಿವು. ವಿದ್ಯೆ ಕಲಿಸಿಕೊಟ್ಟ ಶಿಕ್ಷಕಿಯನ್ನು ಕೊಲ್ಲುವ ವಿದ್ಯಾರ್ಥಿ ವರ್ಗವನ್ನು ನೋಡುತ್ತಿದ್ದೇವೆ. ಅಪ್ರಾಪ್ತ ಶಾಲಾ ವಿದ್ಯಾರ್ಥಿಗಳ ಮೇಲೆ ಅತ್ಯಾಚಾರ, ಕೊಲೆ. ಅಣ್ಣ ತಮ್ಮಂದಿರ ನಡುವೆ ಆಸ್ತಿ ತಗಾದೆಗಳು ಸಾವಲ್ಲಿ ಅಂತ್ಯ. ವೀಲಿಂಗ್ ಯಾಕೆ ಮಾಡುತ್ತಿರುವೆ ಎಂದು ಕೇಳಿದ ವ್ಯಕ್ತಿಯನ್ನು ಇರಿದು ಕೊಂದ ಯುವಕ. ಎಲ್ಲ ಧರ್ಮದ ಧರ್ಮ ರಕ್ಷಕರೆನಿಸಿಕೊಂಡವರಿಂದ ಸಮಾಜ ಘಾತುಕ ಕೆಲಸ. ಹೆತ್ತವರಿಗೆ ಮಕ್ಕಳ ಮೇಲೆ ಅನುಮಾನ. ಕಟ್ಟಿಕೊಂಡವರಿಗೆ ಇಟ್ಟುಕೊಂಡಾರೆಂಬ ಅನುಮಾನ. ನಂಬಿಕೆಗೆ ತಾವಿಲ್ಲದಾಗಿರುವ ಇಂದಿನ ಸಮಾಜದಲ್ಲಿ ಮಾನವ ಸಂಬಂಧಗಳು ನೆಲೆ ಕಳೆದುಕೊಂಡಿವೆ. ಬೆಲೆ ಕಳೆದುಕೊಂಡಿವೆ. ಅದಕ್ಕೆ ಪ್ರೇರಕ ಶಕ್ತಿಯೆಂಬಂತೆ ತಂತ್ರಜ್ಞಾನ ಬೆಳೆದು ನಿಂತಿದೆ. ನಮ್ಮ ನೆರಳನ್ನು ಕೂಡ ನಾವು ನಂಬದಂತಹ ಸ್ಥಿತಿಗೆ ತಲುಪಿರುವುದು ಅತ್ಯಂತ ಕೆಟ್ಟ ಸ್ಥಿತಿಯೆಂದು ಹೇಳಬಹುದಾಗಿದೆ. ಮನುಷ್ಯನನ್ನು ಮನುಷ್ಯನನ್ನಾಗಿಯೇ ಇರಿಸಲು ಧಾರ್ಮಿಕ ನಂಬಿಕೆಗಳು, ಆಚರಣೆಗಳು ಹುಟ್ಟಿಕೊಂಡವು. ಇಂದಿನ ಸ್ಥಿತಿಯಲ್ಲಿ ಧರ್ಮ ಹಾಗೂ ದೇವರುಗಳನ್ನೂ ಕೂಡ ಮನುಷ್ಯನೇ ನಿಯಂತ್ರಿಸಿ ತನ್ನ ಅನುಕೂಲಕ್ಕೆ ತಕ್ಕಂತೆ ಎಲ್ಲವನ್ನು ನಡೆಸಿಕೊಳ್ಳುವ ಹಂತಕ್ಕೆ ಬೆಳೆದಿದ್ದಾನೆ. ಮಾನವ ಸಂಬಂಧಗಳು ಬಣ್ಣ ಕಳೆದುಕೊಂಡರೆ ಸಮಾಜದ ಆರೋಗ್ಯ ಹಾಳಾಗುತ್ತದೆ. ಮೇಲೆ ಸೂಚಿಸಿರುವ ಘಟನೆಗಳನ್ನು ಇಂದು ವಿರಳವಾಗಿ ನಾವು ಸಮಾಜದ ವಿವಿಧ ಭಾಗಗಳಲ್ಲಿ ನೋಡುತ್ತಿದ್ದೇವೆ. ಮುಂದುವರೆದರೆ ಇಡೀ ಸಮಾಜವನ್ನು ಇಂತಹ ಅಮಾನವೀಯ ಘಟನೆಗಳೇ ತುಂಬಿಕೊಳ್ಳುವ ಆತಂಕ ಹಾಗೂ ಭಯ ಸಮಾಜಕ್ಕಿದೆ.

ಕೆಟ್ಟು ಕೂತಿರುವ ಬಂಡಿಯನ್ನು ಸರಿಪಡಿಸಿಕೊಳ್ಳುವ ಜವಾಬ್ದಾರಿ ಸಮಾಜಕ್ಕಿದೆ. ಮಾನವ ಸಂಬಂಧಗಳು ಹಾಳಾಗಿರುವುದು ನಿಜ. ಹಾಗಂದ ಮಾತ್ರಕ್ಕೆ ನಿಯಂತ್ರಣ ತಪ್ಪಿ ಹೋಗಿಲ್ಲ. ಕೆಲವು ಜವಾಬ್ದಾರಿಗಳು ತಮ್ಮ ಸ್ಥಾನವರಿತು ನಡೆದುಕೊಳ್ಳಲು ಪ್ರಾರಂಭಿಸಿದರೆ ಮಾನವ ಸಂಬಂಧಗಳನ್ನು ಮತ್ತಷ್ಟು ಗಟ್ಟಿಯಾಗಿಸುವ ಜೊತೆಗೆ ಸಮಾಜದ ಆರೋಗ್ಯವನ್ನು ಕಾಪಾಡಿಕೊಳ್ಳುವ ಅವಕಾಶ ನಮ್ಮ ಕೈಗಳಲ್ಲಿಯೇ ಇದೆ.

ಮನೆ ಮೊದಲ ಪಾಠ ಶಾಲೆ. ಮನೆಯ ವಾತಾವರಣವನ್ನು ಮಕ್ಕಳ ಬೆಳವಣಿಗೆಗೆ ಪೂರಕವಾಗುವ ಹಾಗೆ ರೂಪಿಸುವ ಎಲ್ಲ ಪೋಷಕರಿಗೆ ಸೇರಿದ್ದು. ಮಗ ಕೆಟ್ಟ, ಮಗಳು ಹಾದಿ ತಪ್ಪಿದಳೆಂದು ಕೊರಗುವುದಕ್ಕಿಂತ ಮಕ್ಕಳು ಮಾನಸಿಕ ಆರೋಗ್ಯದಿಂದ ಮನೆಯ ವಾತಾವರಣದಲ್ಲಿ ಬೆಳೆಯಲು ಯಾವೆಲ್ಲ ಅನುಕೂಲಗಳನ್ನು ಮಾಡಿಕೊಡಬೇಕೊ ಅವುಗಳನ್ನು ವ್ಯವಸ್ಥೆ ಮಾಡುವ ಜವಾಬ್ದಾರಿ ಪೋಷಕರು ನಿರ್ವಹಿಸಬೇಕಾಗುತ್ತದೆ. ಗಿಡವಾಗಿ ಬಗ್ಗದವರು ಮರವಾಗಿ ಎಂದಿಗೂ ಬಾಗುವುದಿಲ್ಲ. ಹಿರಿಯರ ಕಂಡರೆ ಗೌರವ, ತಂದೆ ತಾಯಿ ಗುರುಗಳ ಬಗ್ಗೆ ಗೌರವ, ಹೆಣ್ಣಿ ಕಡೆಗೆ ತೋರಬೇಕಾದ ಗೌರವ, ತಾನು ಮಾಡಬಾರದಾಗಿರುವ ಕೆಲಸ ಹೀಗೆ ಹಲವು ವಿಷಯಗಳ ಕುರಿತಾಗಿ ಅನೌಪಚಾರಿಕವಾಗಿ ಶಿಕ್ಷಿತರನ್ನಾಗಿ ತಿದ್ದಿದರೆ ನಮ್ಮ ಸಮಜ ಆರೋಗ್ಯದಿಂದ

ಕೂಡಿರುತ್ತದೆ. ಜೊತೆಗೆ ಮಾನವ ಸಂಬಂಧಗಳ ಕುರಿತು ಆತಂಕ ಪಡಬೇಕಾಗಿರುವ ಅವಶ್ಯಕತೆಯು ಇರುವುದಿಲ್ಲ. ಮನೆಯಲ್ಲಿ ನಾವು ಮಾತನಾಡುವ ಮಾತು, ನಮ್ಮ ನಡವಳಿಕೆ ಅವರ ಕಲಿಕೆಗೆ ಪ್ರೇರಕ ಶಕ್ತಿಯಾಗಿರುತ್ತದೆ. ಟಿವಿ ಪರದೆಯ ಮೇಲೆ ಬರುವ ನೆಗೆಟೀವ್ ಅಂಶಗಳಿಂದ ಮಕ್ಕಳನ್ನು ದೂರವಿಡುವುದು ಉತ್ತಮ. ಮೊಬೈಲ್ಗಳಿಗೆ ಇಡೀ ಜನ ಸಮುದಾಯವೇ ಮಾರುಹೋಗಿರುವ ಈ ಕಾಲಕ್ಕೆ ಅದರ ಸರಿಯಾದ ಬಳಕೆಯ ಕಡೆಗೆ ಗಮನ ಹರಿಸಬೇಕು. ಬೆಳೆಯುವ ಮಕ್ಕಳು ಅದನ್ನು ಬಳಸುವಾಗ ಒಂದು ನಿಗ ಇರಿಸಬೇಕು. ಮನೆಯಲ್ಲಿ ಎಲ್ಲರೂ ಒಟ್ಟಿಗೆ ಕಾಲಕಳೆಯುವಂತಹ ಸಮಯವನ್ನು ನಿಗದಿಪಡಿಸಿಕೊಳ್ಳಬೇಕು. ಕುಟುಂಬವೆಂದರೆ ಭೌವ್ಯ ಬಂಗಲೆಯಲ್ಲಿ, ನಾವು ಬಳಸುವ ಬೆಲೆ ಬಾಳುವ ವಸ್ತುಗಳಲ್ಲ. ಕುಟುಂಬದ ಸದಸ್ಯರು ಕೂಡಿ ಬಾಳುವುದು. ನಮ್ಮ ಮಾನವ ಸಂಬಂಧಗಳು ಗಟ್ಟಿಯಾಗಲು ಇರುವ ಮೂಲ ಪ್ರೇರಕ ಶಕ್ತಿ.

ಶಾಲೆ ಹಾಗೂ ಶಿಕ್ಷಕರ ಪಾತ್ರ ವಿದ್ಯಾರ್ಥಿಗಳಲ್ಲಿ ಮಾನವ ಸಂಬಂಧಗಳನ್ನು ಮೈಗೂಡಿಸುವಲ್ಲಿ ಮಹತ್ತರ ಪಾತ್ರವಹಿಸುತ್ತದೆ. ಮನೆಯಲ್ಲಿ ಕಥೆಳನ್ನು ಕೇಳುವ ಅದರ ಸಾರವನ್ನು ಮೈಗೂಡಿಸಿಕೊಳ್ಳಲು ಅವಕಾಶವೇ ಇಲ್ಲದಿರುವ ಈ ಕಾಲಕ್ಕೆ ಶಾಲೆ ಹಾಗೂ ಶಿಕ್ಷಕರು ಈ ಕೊರತೆಯನ್ನು ತುಂಬಬಹುದಾಗಿದೆ. ವಿವಿಧ ಹಂತಗಳಲ್ಲಿ ಸಾಹಿತ್ಯದ ಭಾಗವಾಗಿ, ಭಾಷೆಯನ್ನು ಕಲಿಸುವ ಭಾಗವಾಗಿ ಮೌಲ್ಯಗಳನ್ನು ಹಾಗೂ ಸಂಬಂಧಗಳನ್ನು ವಿದ್ಯಾರ್ಥಿಗಳಲ್ಲಿ ಮೈಗೂಡಿಸಬಹುದಾದ ಅವಕಾಶವಿದೆ. ಈ ಅವಕಾಶವನ್ನು ಬಳಸಿಕೊಳ್ಳದೇ ಹೋದರೆ ಒಂದು ಇಡೀ ಜನಾಂಗವನ್ನೇ ನಾಶ ಮಾಡಿದ ಜವಾಬ್ದಾರಿಯನ್ನು ಶಿಕ್ಷಕರು ಹೊರಬೇಕಾಗುತ್ತದೆ.

ಸಮಾಜ ಮಾನವ ಸಂಬಂಧಗಳನ್ನು ಉಳಿಸುವ ಹಾಗೂ ಬೆಳೆಸುವ ಕೆಲಸವನ್ನು ಮಾಡುತ್ತದೆ. ಸರಿಯಾದುದನ್ನು ಪ್ರಶಂಸುತ್ತಾ, ಕೆಡುಕೆನಿಸಿದ್ದನ್ನು ತಿದ್ದುತ್ತಾ ಹೋದರೆ ಮಾನವ ಸಂಬಂಧಗಳು ಮತ್ತಷ್ಟು ಗಟ್ಟಿಯಾಗುತ್ತವೆ.

ಸರ್ಕಾರದ ನಿಯಮಾವಳಿಗಳು ಶಿಸ್ತಿನಿಂದ ಕೂಡಿದ್ದರೆ ನಮ್ಮ ಸಮಾಜದ ಆರೋಗ್ಯ ಸರಿಹೋಗುತ್ತದೆ. ನ್ಯಾಯ ವ್ಯವಸ್ಥೆಯು ಒಂದಷ್ಟು ಕಠಿಣ ಕ್ರಮಗಳನ್ನು ಜರುಗಿಸದ ಹೊರತು ಮಾನವ ಸಂಬಂಧಗಳು ಸರಿಹೋಗುವುದಿಲ್ಲ. ಪ್ರತಿಯೊಂದಕ್ಕೂ ಪರ್ಯಾಯ ಮಾರ್ಗಗಳನ್ನು ಕಂಡುಕೊಂಡಿರುವ ಮನುಷ್ಯ ತನ್ನಿಷ್ಟಕ್ಕೆ ತಾನು ನಡೆದುಕೊಳ್ಳಲು ಪ್ರಾರಂಭವಾದಾಗಿನಿಂದ ಮಾನವ ಸಂಬಂಧಗಳು ಕಳೆ ಕಳೆದುಕೊಂಡಿರುವುದು.

ತಂತ್ರಜ್ಞಾನದ ದುರ್ಬಳಕೆಗೆ ಕಡಿವಾಣ ಹಾಕಿದರೆ ಇಂದಿನ ಯುವ ಜನಾಂಗ ಒಂದಷ್ಟು ಸರಿ ಹಾದಿಗೆ ಬರಲು ಅವಕಾಶಗಳಿರುತ್ತವೆ. ಮಾಧ್ಯಮಗಳ ಅತಿರಂಜಕ ಸುದ್ಧಿಗಳನ್ನು ನಿಯಂತ್ರಿಸಬೇಕಾಗಿರುವುದು ಅಷ್ಟೇ ಮುಖ್ಯವಾಗಿದೆ.

ಧರ್ಮ, ದೈವ, ಧಾರ್ಮಿಕ ಅನುಕರಣೆಯೊಂದೇ ಸಾತ್ವಿಕ ಭಾವನೆಯನ್ನು ಮನುಷ್ಯರಿಗೆ ನೀಡುವುದಿಲ್ಲ. ಸರಿಯಾದ ಅರಿವು ನಮ್ಮದಾದರೆ ಬದುಕು ಹಸನಾಗುತ್ತದೆ. ಜೊತೆಗೆ ಮಾನವ ಸಂಬಂಧಗಳು ಮತ್ತಷ್ಟು ಸಮೃದ್ಧವಾಗಿ ನಮ್ಮಲ್ಲಿ ಮೈಗೂಡುತ್ತವೆ. ಸಮಾಜ ಮತ್ತಷ್ಟು ಆರೋಗ್ಯಕರವಾಗಿರುತ್ತದೆ.

"ಸಂಬಂಜ ಅನ್ನೋದು ದೊಡ್ಡದು ಕಲಾ" ಕುಸುಮಬಾಲೆಯಲ್ಲಿ ದ್ಯಾವನೂರರ ಈ ಮಾತು ಎಲ್ಲ ಕಾಲಕ್ಕೂ ಸಲ್ಲುವಂತದ್ದು. ಒಬ್ಬರಿಗೊಬ್ಬರು ಹೊಂದಿಕೊಂಡು ಅನ್ಯೋನ್ಯವಾಗಿ ಬದುಕುವಂತಾಗದೇ ಹೋದರೆ ನಾವು ಎಷ್ಟೆಲ್ಲ ಸಾಧನೆಗಳನ್ನ ಮಾಡಿದರೇನು? ಸಾವು ನಿಶ್ಚಿತವಾಗಿರವ ನಮ್ಮ ಬದುಕು ಮಾನವ ಸಂಬಂಧಗಳನ್ನು ಉಳಿಸಿ ಬೆಳೆಸುವುದಕ್ಕೆ ಪೂರಕವಾಗಿರಬೇಕೆ ಹೊರತು ಮಾರಕವಾಗಬಾರದು. ಮೌಲ್ಯಗಳು ಮೌನವಾದರೆ ಮಾನವನಲ್ಲಿ ಅಡಗಿರುವ ಮೃಗೀಯ ಗುಣ ನಾಟ್ಯವಾಡಲು ಪ್ರಾರಂಭಿಸುತ್ತದೆ. ನಮ್ಮ ಕುಟುಂಬ, ಓದು, ಅರಿವು, ಬದುಕು ಸದಾ ಮಾನವನಲ್ಲಿನ ಮೌಲ್ಯಗಳನ್ನು ಮೌನವಾಗಿಡಲು ಬಿಡದೆ ಬೆಚ್ಚನೆಯ ಕಾವನ್ನು ಕೊಡುತ್ತಿರಲೇಬೇಕು. ಯಾಕೇಂದ್ರೆ "ಬದುಕು ಮುಖ್ಯ".

**ಪರಾಮರ್ಶನ**


1. ದ್ಯಾವನೂರು ಮಹಾದೇವ. "ಕುಸುಮಬಾಲೆ." ಪುಸ್ತಕ ಪ್ರಕಾಶನ.
2. https://www.prajavani.net/district/understand-human-relations-576156.html
3. https://www.udayavani.com/sudina/sudina-selection/values-%E2%80%8B%E2%80%8Bare-the-property-of-life